ಧಾರಾವಾಹಿ

# ಬನ್ನಿ, ಬೇಲೂರು ಮಠಕ್ಕೆ

ಸ್ವಾಮಿ
ಆಶುತೋಷಾನಂದ

(*ಹಿಂದಿನ ಸಂಚಿಕೆಯಿಂದ* )



**ದೇ**ಗುಲಗಳ ಶಿಲ್ಪಕಲೆಯಲ್ಲಿ ಈ ದೇವಮಂದಿರವು ಹೊಸ ಹಾದಿಯನ್ನು ತೆರೆದಿದೆ ಎಂದು ಹೇಳಬಹುದು. ಇದರ ಶಿಲ್ಪಕಲೆಯು ಪೂರ್ವ ಮತ್ತು ಪಶ್ಚಿಮ ದೇಶಗಳ ಶಿಲ್ಪಕಲಾಶೈಲಿಯ ಸುಮಧುರ ಸಂಗಮವಾಗಿದೆ. ಗರ್ಭಗುಡಿ ಮತ್ತು ನಾಟಮಂದಿರ (ಪ್ರಾರ್ಥನಾಗೃಹ), ಕೂಡಿಕೊಂಡಿರುವ ಬಗೆ ಚರ್ಚಿನ ವಿನ್ಯಾಸವನ್ನು ಹೋಲುತ್ತದೆ. ಭಾರತದ ದೇಗುಲ ಶಿಲ್ಪಕಲೆಯಲ್ಲಿಯೇ ಇದೊಂದು ವೈಶಿಷ್ಟ್ಯಪೂರ್ಣವಾದ ಸಂಗತಿ. ಪ್ರಾಚೀನ ದೇಗುಲಗಳಲ್ಲಿ, ನೂರಾರು ಜನರು ಒಟ್ಟಿಗೆ ಸೇರಿ, ಪೂಜಿಸುವ ಪ್ರಾರ್ಥನಾಮಂದಿರದ ಕಲ್ಪನೆ ಕಂಡು ಬರುವುದಿಲ್ಲ.

ಪ್ರಾರ್ಥನಾಮಂದಿರವು ಮುಂಬೈ ಹತ್ತಿರ ಇರುವ ಕುರ್ಲಾ ಎಂಬ ಸ್ಥಳದಲ್ಲಿರುವ ಬೌದ್ಧವಿಹಾರವನ್ನು ಹೋಲುತ್ತದೆ. ಗರ್ಭಮಂದಿರದ ಕಿಟಕಿಗಳು ಮತ್ತು ಅಲಂಕಾರಯುಕ್ತವಾದ ಕಮಾನುಗಳು ರಾಜಪೂತರ ಮತ್ತು ಮೊಗಲರ ಶೈಲಿಗಳಲ್ಲಿವೆ.


ಈಗ ನಾವು ದೇವಾಲಯಕ್ಕೆ ಪ್ರದಕ್ಷಿಣೆಯನ್ನು ಮಾಡೋಣ. ಗರ್ಭಗುಡಿಯ ಗೋಡೆಗಳಲ್ಲಿನ ಕಮಾನುಗಳ ಮೇಲೆ ನಾವು ನವಗ್ರಹಗಳ ಕೆತ್ತನೆಗಳನ್ನು ಕಾಣುತ್ತೇವೆ. ಸೂರ್ಯ, ಬೃಹಸ್ಪತಿ, ಮಂಗಳ – ಇವು ಉತ್ತರ ದಿಕ್ಕಿನಲ್ಲಿವೆ. ಸೋಮ, ಶುಕ್ರ ಮತ್ತು ಬುಧ – ಇವು ಪೂರ್ವ ದಿಕ್ಕಿನಲ್ಲಿವೆ. ಕೇತು, ಶನಿ ಮತ್ತು ರಾಹು – ಇವು ಪಶ್ಚಿಮ ದಿಕ್ಕಿನಲ್ಲಿವೆ. ಇದು ಒರಿಸ್ಸಾದ ದೇವಾಲಯಗಳ ಶಿಲ್ಪಾಕೃತಿಗಳನ್ನು ಹೋಲುತ್ತವೆ. ಹಾಗೆಯೇ, ದೇಗುಲದ ಪಶ್ಚಿಮ ಮತ್ತು ಪೂರ್ವ ದಿಕ್ಕುಗಳ ದ್ವಾರಗಳ ಮೇಲ್ಭಾಗದಲ್ಲಿ ಕ್ರಮವಾಗಿ ಹನುಮಂತ ಮತ್ತು ಗಣೇಶರ ಆಕೃತಿಗಳಿವೆ.

ಮುಖ್ಯ ದ್ವಾರವು ಬೌದ್ಧಕಲಾಶೈಲಿಯಲ್ಲಿದ್ದರೆ, ಅದರ ಮೇಲ್ಭಾಗದಲ್ಲಿರುವ ಗೋಪುರಾಕೃತಿಯು ದಕ್ಷಿಣಭಾರತದ ಗೋಪುರಗಳ ಶೈಲಿಯನ್ನು ಹೋಲುತ್ತದೆ. ಮುಖ್ಯದ್ವಾರದ ಮೇಲುಗಡೆ ರಾಮಕೃಷ್ಣ ಮಹಾಸಂಘದ ಸಂಕೇತದ ಕೆತ್ತನೆಯಿದೆ. ಈ ಸಂಕೇತವನ್ನು ಸ್ವಾಮಿ ವಿವೇಕಾನಂದರೇ ಸ್ವತಃ ವಿನ್ಯಾಸ ಮಾಡಿದ್ದಾರೆ. ಈ ಕೆತ್ತನೆಯು ಜಾಲಂಧ್ರವಾಗಿಯೂ ಪರಿಣಮಿಸಿದೆ. ರಾಮಕೃಷ್ಣ ಮಹಾಸಂಘದ ಸಂಕೇತವು ನಿಷ್ಕಾಮ ಕರ್ಮ (ಉಬ್ಬರದ ಅಲೆಗಳುಳ್ಳ ನೀರು), ಭಗವದ್ಭಕ್ತಿ (ಕಮಲ), ಜ್ಞಾನ (ಸೂರ್ಯ), ಧ್ಯಾನ (ಸರ್ಪ) –ಇವುಗಳ ಮೂಲಕ ಆತ್ಮಜ್ಞಾನ ವನ್ನು (ಹಂಸ) ಪಡೆಯಬಹುದು ಎಂದು ಸೂಚಿಸುತ್ತದೆ.

ಇದರ ಮೇಲುಗಡೆ ಶಿವಲಿಂಗವಿದೆ. ಶ್ರೀರಾಮಕೃಷ್ಣರ ಜೀವನದಲ್ಲಿ ಶಿವಲಿಂಗಕ್ಕೆ ಬಹಳ ಪ್ರಾಧಾನ್ಯತೆ ಇರುವುದನ್ನು ಕಾಣುತ್ತೇವೆ. ಅವರ ತಾಯಿ ಚಂದ್ರಮಣಿ ದೇವಿ, ಮನೆಯ ಮುಂದಿರುವ ಶಿವಲಿಂಗದಿಂದ ದಿವ್ಯಜ್ಯೋತಿಯೊಂದು ಬಂದು ತಮ್ಮ ದೇಹವನ್ನು ಪ್ರವೇಶಿಸಿದಂತೆ ದರ್ಶನವನ್ನು ಹೊಂದಿದರು. ತದನಂತರವೇ ದಿವ್ಯಶಿಶುವೊಂದನ್ನು ಗರ್ಭದಲ್ಲಿ ಧರಿಸಿರುವುದನ್ನು ಕಂಡುಕೊಂಡರು.

## ಸಂಕ್ಷಿಪ್ತ ಇತಿಹಾಸ

ಶ್ರೀರಾಮಕೃಷ್ಣರ ಪವಿತ್ರ ಅಸ್ಥಿಯನ್ನು ರಕ್ಷಿಸಿಡಬೇಕು, ಅದನ್ನು ಪೂಜಾಕೇಂದ್ರವಾಗಿ ಹೊಂದಿದ ಬೃಹತ್ ದೇಗುಲವೊಂದು ಅವರಿಗೆ ಅರ್ಪಿತವಾಗಬೇಕು – ಇದು ಸ್ವಾಮಿ ವಿವೇಕಾನಂದರ ಬಹುದಿನಗಳ ಅದಮ್ಯ ಬಯಕೆಯಾಗಿತ್ತು. ಈ ದೇವಾಲಯದ ನಿರ್ಮಾಣವು ಅವರ ಜೀವಿತಕಾಲದಲ್ಲಿ ಕೈಗೂಡಲಿಲ್ಲ. ಆದ್ದರಿಂದ ಅವರು, ಈಗ 'ಹಳೆಯ ದೇವಸ್ಥಾನ' ಎಂದು ಕರೆಯಲಾಗುವ ಮಂದಿರದಲ್ಲಿ ಅದನ್ನು ಸ್ಥಾಪಿಸಿದರು. ಆದರೂ, ತಮ್ಮ ಶರೀರವನ್ನು ಬಿಟ್ಟುಹೋಗುವ ಮೊದಲು, ಒಂದು ದೇವಮಂದಿರದ ನಕಾಶೆಯನ್ನು ತಯಾರುಮಾಡಿಸಿದರು. ಅವರ ನಿರ್ದೇಶನಗಳ ಪ್ರಕಾರವೇ ಶ್ರೀರಾಮಕೃಷ್ಣರ ಇನ್ನೊಬ್ಬ ಪ್ರತ್ಯಕ್ಷಶಿಷ್ಯರಾದ ಸ್ವಾಮಿ ವಿಜ್ಞಾನಾನಂದಜಿ ಅವರು, ದೇವಸ್ಥಾನದ ವಿನ್ಯಾಸವನ್ನು ಮಾಡಿದರು. ಅವರೊಬ್ಬ ಅರ್ಹತೆ ಪಡೆದ ಸಿವಿಲ್ ಇಂಜಿನೀಯರ್ ಆಗಿದ್ದರು. ದೇವಾಲಯವು ಸಾಕಾರರೂಪವನ್ನು ತಳೆಯುವುದನ್ನು ನೋಡಲು, ಸ್ವಾಮಿ ವಿವೇಕಾನಂದರು ಬದುಕುಳಿಯಲಿಲ್ಲವಾದರೂ, 'ಮೇಲಿ' ನಿಂದಲೇ ಅದನ್ನು ವೀಕ್ಷಿಸುವುದಾಗಿ ಆಶ್ವಾಸನೆ ಕೊಟ್ಟರು.



ರಾಮಕೃಷ್ಣ ಮಹಾಸಂಘದ ದ್ವಿತೀಯ ಪರಮಾಧ್ಯಕ್ಷರಾದ ಸ್ವಾಮಿ ಶಿವಾನಂದಜಿ ಅವರು ದೇವಸ್ಥಾನದ ಶಂಕುಸ್ಥಾಪನೆಯನ್ನು ೧೯೨೯, ಮಾರ್ಚ್ ೧೩ ರಂದು ನೆರವೇರಿಸಿದರು. ಅಂದು ಶ್ರೀರಾಮಕೃಷ್ಣರ ಜಯಂತಿಯ ಪರ್ವದಿನವಾಗಿತ್ತು. ಆದರೆ ಹಣದ ಅಭಾವದಿಂದ, ನಿರ್ಮಾಣ ಕಾರ್ಯವನ್ನು ಕೂಡಲೇ ಆರಂಭಿಸಲಾಗಲಿಲ್ಲ. ಇದಾಗಿ ಐದು ವರ್ಷಗಳ ನಂತರವಷ್ಟೇ, ಮಿಸ್ ಹೆಲೆನ್ ರುಬೆಲ್ (ಭಾರತಿ) ಮತ್ತು ಮಿಸೆಸ್ ಅನ್ನಾ ವೋರ್‌ಸ್ಟರ್ (ಅನ್ನಪೂರ್ಣ) – ಇವರಿಬ್ಬರು ನೀಡಿದ ಧನಸಹಾಯದಿಂದ ನಿರ್ಮಾಣಕಾರ್ಯ ಆರಂಭಗೊಂಡಿತು. ಈ ಉದಾರ ದೇಣಿಗೆಯಿಂದ, ಅಮೆರಿಕ ದೇಶದ ಈ ಇಬ್ಬರು ಭಕ್ತೆಯರು ರಾಮಕೃಷ್ಣ ಮಠ ಮತ್ತು ಮಿಷನ್ನಿನ ಇತಿಹಾಸದೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿದ್ದಾರೆ; ಶ್ರೀರಾಮಕೃಷ್ಣರ ಭಕ್ತವೃಂದಕ್ಕೆ ಪ್ರೀತಿಪಾತ್ರರಾಗಿದ್ದಾರೆ.

ಕಟ್ಟಡದ ಕಾರ್ಯವನ್ನು ಆರಂಭಿಸುವ ಮೊದಲು, ಅದರ ಅಡಿಪಾಯವನ್ನು, ತಂತ್ರಜ್ಞರ ಸಲಹೆಯ ಮೇರೆಗೆ, ಈ ಹಿಂದೆ ಗುರುತಿಸಿದ್ದ ಸ್ಥಳಕ್ಕಿಂತ ನೂರು ಅಡಿಗಳಷ್ಟು ದೂರಕ್ಕೆ ಸ್ಥಳಾಂತರಿಸಬೇಕಾಯಿತು. ಆ ಸಂದರ್ಭದಲ್ಲಿ, ಅಂದಿನ ಮಹಾಸಂಘದ ಅಧ್ಯಕ್ಷರಾದ ಸ್ವಾಮಿ ವಿಜ್ಞಾನಾನಂದರು, ಈ ಹೊಸ ಸ್ಥಳದಲ್ಲಿ ಮತ್ತೊಮ್ಮೆ ಶಂಕುಸ್ಥಾಪನೆಯನ್ನು, ೧೯೩೫, ಜುಲೈ ೧೬, ಗುರುಪೂರ್ಣಿಮೆಯಂದು ನೆರವೇರಿಸಿದರು. ಬೆಳಗಿನ ಜಾವ ಶ್ರೀರಾಮಕೃಷ್ಣರ ಕೃಪಾಶೀರ್ವಾದಗಳನ್ನು ಕೋರುವ ಸಲುವಾಗಿ, ಅವರು ಮಂದಿರಕ್ಕೆ ಹೋದರು. ಬೆಳಗ್ಗೆ ೮.೧೫ ಕ್ಕೆ ಶಂಕುಸ್ಥಾಪನೆಯ ಸಮಯ ಎಂದು ನಿಗದಿತವಾಗಿತ್ತು. ಆದರೂ ಅವರು ಬರಲೇ ಇಲ್ಲ. ಸ್ವಾಮಿಗಳು ತಮ್ಮ ಸಮಯಪಾಲನೆಗೆ ಹೆಸರಾಗಿದ್ದರು. ಆದರೆ ಅಂದು ಗರ್ಭಗುಡಿಯಲ್ಲಿಯೇ ಬಹಳಷ್ಟು ಹೊತ್ತನ್ನು ಕಳೆದರು. ೮.೩೦ ರ ನಂತರವಷ್ಟೇ ಅವರು ಹೊರಗೆ ಬಂದರು. ತಡವಾಗಿದ್ದಕ್ಕೆ ಕಾರಣ ಕೇಳಿದಾಗ, ಅವರು ಹೀಗೆ ಹೇಳಿದರು: "ನಾನೇನು ಮಾಡಲಿ! ಶ್ರೀರಾಮಕೃಷ್ಣರು ಹೊರಬರಲು ನನ್ನನ್ನು ಬಿಡಲೇ ಇಲ್ಲವಲ್ಲ!"

ಶಂಕುಸ್ಥಾಪನೆಯ ಆ ಪುಣ್ಯದಿನದಂದು ಇನ್ನೊಂದು ಅಪೂರ್ವ ಘಟನೆ ನಡೆಯಿತು. ಪೂಜಾಕಾರ್ಯಗಳ ಆರಂಭದಲ್ಲಿ, ಸುಂದರವಾಗಿ ಅಲಂಕರಿಸಿದ್ದ ಶ್ರೀರಾಮಕೃಷ್ಣರ ಚಿತ್ರಪಟದ ಮುಂದೆ ಸ್ವಾಮಿ ವಿಜ್ಞಾನಾನಂದರು ನಿಂತುಕೊಂಡಿದ್ದರು. ಅವರು ಕೈಯಲ್ಲಿ, ಶ್ರೀರಾಮಕೃಷ್ಣರಿಗೆ ಸಮರ್ಪಿಸಲೆಂದು ಅರ್ಘ್ಯವನ್ನು (ಹೂವುಗಳು, ಗಂಧ, ಬಿಲ್ವ ಪತ್ರೆ, ಮುಂತಾದವು) ಹಿಡಿದುಕೊಂಡಿದ್ದರು. ಆಗ ಸಣ್ಣದಾಗಿ ಗಾಳಿ ಬೀಸಿತು. ಅರ್ಘ್ಯ ಅವರ ಕೈಯಿಂದ ಜಾರಿ, ಅದನ್ನು ಎಲ್ಲಿ ಇರಿಸಬೇಕಾಗಿತ್ತೋ, ಅಲ್ಲಿಗೇ ಹೋಗಿ ಸೇರಿತು. ಸ್ವಾಮಿ ವಿವೇಕಾನಂದರೇ ಮೊದಲ ಅರ್ಘ್ಯವನ್ನು ಶ್ರೀರಾಮಕೃಷ್ಣರಿಗೆ ಸಮರ್ಪಿಸಿದರು ಎಂಬ ಭಾವನೆ ಎಲ್ಲರಿಗೂ ಉಂಟಾಯಿತು. ಅನಂತರ ಸ್ವಾಮಿ ವಿಜ್ಞಾನಾನಂದರು ಇನ್ನೊಂದು ಅರ್ಘ್ಯವನ್ನು ಗುರುದೇವರಿಗೆ ಸಮರ್ಪಿಸಿದರು.

(*ಮುಂದುವರಿಯುವುದು*)